Sri H. M. CHANNABASAPPA.—I want notice.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಮೆರಿಟ್ಸ್ ಮೇಲೆ ಕನ್ಸಿಡರ್ ಮಾಡಲಾಗುವುದು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹೊಸದಾಗಿ ರೈಲ್ವೇ ಲೈನನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರದವರು ಯಾವ ನೀತಿಯನ್ನು ಇಟ್ಟುಕೊಂಡಿದ್ದಾರೆ?

ಅಧ್ಯಕ್ಷರು.—ಅದು ಜನರಲ್ ಕ್ವಶ್ಚನ್ ಆಯಿತು.

Misappropriation of Funds in T. A. P. M. C. Society, Turuvekere

201. Sri B. BYRAPPAJI (Turuvekere).—

Will the Minister for Co-operation be pleased to state :—

(*a*) whether it has come to the notice of the Government that there was misappropriation of funds and abuse of power in Turuvekere Taluk Agricultural Produce Marketing Co-operative Society;

(*b*) if so, the steps taken by the Government in this behalf?

Sri A. SHANKARA ALVA (Minister for Co-operation).—

(*a*) Yes.

(*b*) Suits have been filed against all the concerned and criminal action has been taken in respect of two.

ಶ್ರೀ ಬೈರಪ್ಪಾಜಿ.—ಈ ಸೊಸೈಟಿಯಲ್ಲಿ ಎಷ್ಟು ಜನ ಹಣ ತಿಂದುಹಾಕಿದ್ದಾರೆ ಅವರುಗಳ ಮೇಲೆ ಯಾವಾಗ ದಾವಾ ಮತ್ತು ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದೀರಿ ಮತ್ತು ಈಗ ಅವುಗಳು ಯಾವ ಹಂತದಲ್ಲಿವೆ ಎಂಬುದನ್ನು ಹೇಳುತ್ತೀರಾ?

Sri A. SHANKARA ALVA.—

		Amount. due	*Recovered*	*Balance*
1.	H. Ramiah	Rs. 5,605	Rs. 577	4,928.30
	decreed for the balance amount of Rs.			4,928.30
2.	Thimmiah, K. M.	Rs. 61,208	Rs. 15,922	45,285
	In criminal proceedings, the lower court convicted but on appeal it has been set aside.			
3.	K. G. Krishnaswamy	Rs. 9,262	Rs. 6,372	2,377
	Decree of the court obtained.			
4.	H. G. Rangappa Sales clerk	Rs. 16,000	Rs. 13,281	2,386
	Court decree obtained.			
5.	Venkate gowda	Rs. 37	amount recovered.	
6.	Hutche Gowda clerk criminal case is pending.	Rs. 4,791	not recovered.	

ಶ್ರೀ ಬಿ. ಬೈರಪ್ಪಾಜಿ.—ಹಣ ತಿಂದಿರುವವರಲ್ಲಿ ಅಧಿಕಾರೇತರರು ಸಹ ಸೇರಿಕೊಂಡಿದ್ದಾರೆ, ಅವರು ಅಧ್ಯಕ್ಷರು ಇರಬಹುದು. ಇವರ ಜೊತೆಗೆ ಸರ್ಕಾರದವರು ಕಳಿಸಿಕೊಟ್ಟಂತಹ ಅಡ್ಮಿನಿಸ್ಟ್ರೇಟರ್ ಕೂಡ ಹಣ ತಿಂದಿದ್ದಾರೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಮುಂದೆ ಬರುವವರು ಸಹ ಹಿಂದಿನವರು ಸಾಏರಗಟ್ಟರೆ ಹಣ ತಿಂದಿದ್ದಾರೆಂಕೊಂಡು ತಾವು ಸಹ ತಿನ್ನುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈ ಕಾರಣದಿಂದ ಹಣ ತಿಂದಿರುವವರ ಬಗ್ಗೆ ತ್ವರಿತ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಸಾಧ್ಯವಾದರೆ ಅವರನ್ನು ಜೈಲಿಗೆ ಕಳಿಸಿಕೊಡುವುದಕ್ಕೂ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಮಾನ್ಯ ಸದಸ್ಯರ ಅಭಿಪ್ರಾಯದಂತೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಕೆಲವರ ಮೇಲೆ ದಾವಾ ಕ್ರಮವನ್ನು ಕೆಲವರ ಮೇಲೆ ಕ್ರಿಮಿನಲ್ ಕ್ರಮವನ್ನು ತೆಗೆದು ಕೊಳ್ಳಲಾಗಿದೆ. ಹಣವೂ ಸಹ ಸ್ವಲ್ಪ ವಸೂಲಿಯಾಗಿದೆ.

ಶ್ರೀ ಟಿ. ಎಂ. ಮಂಜುನಾಥ.—ನುಮಾರು 61 ಸಾವಿರ ರೂಪಾಯಿಗಳಷ್ಟನ್ನು ದುರುಪಯೋಗ ಮಾಡಿರುವ ಕ್ಲಾರ್ಕ್ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ? ಆ ಹಣಕ್ಕೆ ಖಾತರಿ ಏನು ? ಅವರ ಆಸ್ತಿಯನ್ನು ಏನಾದರೂ ಅಟ್ಯಾಚ್ ಮಾಡಿಸಿದ್ದೀರಾ ?

ಶ್ರೀ ಎ. ಶಂಕರ ಆಳ್ವ.—ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ದುರುಪಯೋಗವಾದ ಹಣಕ್ಕೆ ಡಿಕ್ರಿಯಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಹಕಾರೀ ಸಂಘಗಳಲ್ಲಿ ಹಣ ದುರುಪಯೋಗ ಮಾಡಿದವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ತಾವೇನೋ ಹಾಕುತ್ತೀರಿ ? ಆದರೆ ತೀರ್ಮಾನವಾಗುವುದರೊಳಗೆ ಅವರು ಫ್ಲಿಡಾರ್ ತೆಗೆದುಕೊಂಡು ನತ್ತುಹೋಗುತ್ತಾರೆ. ಇಂತಹ ಒಂದು ಕೇಸ್ ರಾಮನಗರದಲ್ಲಿ ನಡೆದಿದೆ. ಈ ಕಾರಣದಿಂದ ಇನ್ನು ಮುಂದೆ ಹಣದ ಬಗ್ಗೆ ಏನಾದರೂ ಖಾತರಿ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಇದು ರಾಮನಗರಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ.

ಶ್ರೀ ಬಿ. ಬೈರಪ್ಪಾಜಿ.—ಈ ಸೊಸೈಟಿಯಲ್ಲಿ ಎಚ್. ರಾಮಯ್ಯ ಎಂಬುವರು ಹಣ ದುರುಪಯೋಗ ಮಾಡಿದ್ದಾರೆಂದು ಹೇಳಿದಿರಿ. ಆ ಹಣವನ್ನು ವಸೂಲಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎ. ಶಂಕರ ಆಳ್ವ.—ಅವರಿಂದ 5,500 ರೂಪಾಯಿಗಳ ಬಾಕಿ ಬರಬೇಕು. ಹಿಂದಿನ ಬಾಕಿ ಕೊಡದೆ ಇದ್ದುದಕ್ಕಾಗಿ ಡಿಕ್ರಿ ಆದ ಮೇಲೆ ಅದರ ಬಗ್ಗೆ ಆಪೀಲ್ ಮಾಡಿದ್ದಾರೆ.

Munnor Lift Irrigation Scheme in Buntwal Taluk

206. Sri B. V. KAKKILAYA (Buntwal).—

Will the Minister for Public Works and Electricity be pleased to state :—

(*a*) whether the Munnor Lift Irrigation Scheme in Buntwal Taluk of South Kanara District is in disrepair and has been so always from the very beginning ;

(*b*) whether the pumping machinery had broken down in 1971 ; the delivery pipes are always leaking and there is shortage of power supply ;

(*c*) if so, the steps taken or are contemplated to be taken to set right the defects and made the Scheme work satisfactorily ?